**IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಧಾರವಾಡ**

**ಎಸ್.ಸಿ. ಸಂಖ್ಯೆ 27/2022**

ಫಿರ್ಯಾದಿದಾರರು : ರಾಜ್ಯದ ಪರವಾಗಿ, ಸಹಾಯಕ ಸಬ್ ಇನ್ಸಪೆಕ್ಟರ್, ಶಹರ ಪೊಲೀಸ ಠಾಣೆ, ಧಾರವಾಡ.

ವಿರುದ್ಧ

ಆರೋಪಿ : ಶಿವಶಂಕರ ತಂದೆ ದ್ಯಾಮಣ್ಣ ಗರಗ,
ವಯಸ್ಸುಃ 30 ವರ್ಷ, ಉದ್ಯೋಗಃ ಪೇಂಟರ/
ಇಲೆಕ್ಟ್ರೀಷಿಯನ್,
ಸಾಃ ಅಶೋಕ ರೋಡ,
ಅಳ್ನಾವರ, ಜಿಲ್ಲೆಃ ಧಾರವಾಡ.
ಹಾಲಿವಸ್ತಿ ಧಾರವಾಡ.

## ದೋಷಾರೋಪಣೆ

**ಶ್ರೀಮತಿ ಹಿರೇಮಠ ಶೋಭಾರಾಣಿ ಬಾಬಯ್ಯ ,ಬಿಕಾಂ., ಎಲ್‌ಎಲ್.ಬಿ. (ಸ್ಪೇಷಲ್), IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ** ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ಧಾರವಾಡ ಶಹರ ಪೊಲೀಸ ಠಾಣೆ ಹದ್ದಿ ಲೈನ ಬಜಾರ ಕೊರವರ ಓಣಿಯಲ್ಲಿ, ದಿನಾಂಕ 21.02.2022 ರಂದು ಆರೋಪಿತರಾದ ನೀವು ಈ ಪ್ರಕರಣದ ಫಿರ್ಯಾದಿದಾರರಿಗೆ ಗಾಯ, ಹಲ್ಲೆ ಅಥವಾ ಪ್ರತಿಬಂಧ ಮಾಡಲು

ಸಿದ್ಧತೆ ಮಾಡಿಕೊಂಡು ಫಿರ್ಯಾದಿದಾರರ ಮನೆಯ ಬಾಗಿಲನ್ನು ಜೋರಾಗಿ ದೂಡಿ ಒಳಗಡೆಗೆ ಅಕ್ರಮವಾಗಿ ಪ್ರವೇಶಿಸಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ.452 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಮತ್ತು ಸಂದರ್ಭದಲ್ಲಿ, ಆರೋಪಿತರಾದ ನೀವು ಫಿರ್ಯಾದಿದಾರರ ಮನೆಯ ಬಾಗಿಲನ್ನು ಜೋರಾಗಿ ದೂಡಿ ಒಳಗಡೆಗೆ ಅಕ್ರಮವಾಗಿ ಪ್ರವೇಶಿಸಿ ಫಿರ್ಯಾದಿದಾರರನ್ನು ಉದ್ದೇಶಿಸಿ ಜೊತೆಗೆ ಬಾ ಮದುವೆ ಮಾಡಿಕೊಂಡು ಒಟ್ಟಿಗೆ ಸುಖವಾಗಿ ಇರೋಣ ಅಂತಾ ಹೇಳಿದ್ದಕ್ಕೆ ನಿರಾಕರಿಸಿದ ಫಿರ್ಯಾದಿಗೆ ಅವರ ಕಪಾಳಕ್ಕೆ ಹೊಡೆಯುತ್ತಿರುವಾಗ ಚಾಸಾ-10 ನೇದವರು ಬಿಡಿಸಿದರೂ ಚಾಕುವಿನಿಂದ ಫಿರ್ಯಾದಿದಾರರ ತೊಡೆಗೆ ಚುಚ್ಚಿ ಸ್ವಇಚ್ಛೆಯಿಂದ ಸಾದಾ ಸ್ವರೂಪದ ಗಾಯಪಡಿಸಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಮತ್ತು ಸಂದರ್ಭದಲ್ಲಿ, ಆರೋಪಿತರಾದ ನೀವು ಫಿರ್ಯಾದಿದಾರರನ್ನು ಉದ್ದೇಶಿಸಿ ಜೊತೆಗೆ ಬಾ ಮದುವೆ ಮಾಡಿಕೊಂಡು ಒಟ್ಟಿಗೆ ಸುಖವಾಗಿ ಇರೋಣ ಅಂತಾ ಹೇಳಿದ್ದಕ್ಕೆ ಫಿರ್ಯಾದಿಯು ನಿರಾಕರಿಸಿದ್ದಕ್ಕೆ ಫಿರ್ಯಾದಿದಾರರನ್ನು ಕೊಲೆ ಮಾಡುವ ಉದ್ದೇಶದಿಂದ ಮಾರಕಾಸ್ತವಾದ ಚಾಕುವಿನಿಂದ ಅವರ

ಹೊಟ್ಟೆಗೆ ಚುಚ್ಚಲು ಹೋಗಿದ್ದು ಇದರಿಂದ ಫಿರ್ಯಾದಿಯು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಅದು ಅವರ ಎಡಗಾಲು ತೊಡೆಗೆ ಚುಚ್ಚಿ ರಕ್ತಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**307** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಮತ್ತು ಸಂದರ್ಭದಲ್ಲಿ, ನಿಮ್ಮ ಜೊತೆ ಫಿರ್ಯಾದಿದಾರರು ಮದುವೆಯಾಗಲು ನಿರಾಕರಿಸಿದ್ದಕ್ಕೆ ಆರೋಪಿತರಾದ ನೀವು ಫಿರ್ಯಾದಿದಾರರಿಗೆ ಲೇ ಹಾದರಗಿತ್ತಿ ಅಂತಾ ಅವಾಚ್ಯ ಶಬ್ದಗಳಿಂದ ಉದ್ದೇಶಪೂರ್ವಕವಾಗಿ ನಿಂದಿಸಿ, ಫಿರ್ಯಾದಿದಾರರಿಗೆ ಸಾರ್ವಜನಿಕ ಶಾಂತತೆ ಭಂಗ ಮಾಡಲು ಅಥವಾ ಇನ್ನಾವುದೋ ಗುನ್ಹೆ ಮಾಡಲು ಪ್ರಚೋದಿಸಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**504** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಮತ್ತು ಸಂದರ್ಭದಲ್ಲಿ, ಫಿರ್ಯಾದಿದಾರರು ನಿಮ್ಮ ಜೊತೆ ಮದುವೆಯಾಗಲು ನಿರಾಕರಿಸಿದ್ದಕ್ಕೆ ಫಿರ್ಯಾದಿದಾರರಿಗೆ ಇನ್ನೊಮ್ಮೆ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**506** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲಿನ ಆರೋಪಣೆಗಳಿಗೆ ಮೇಲೆ ಹೇಳಿದ ನ್ಯಾಯಾಲಯದಿಂದ ವಿಚಾರಣೆಗೊಳಪಡತಕ್ಕದ್ದು ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

**(ಆರೋಪಣೆಯನ್ನು ದಿನಾಂಕ 06 ಡಿಸೆಂಬರ್ 2022 ರಂದು ರಚಿಸಲಾಯಿತು.)**

Sd/- 06.12.2022.

ದಿನಾಂಕ: 06/12/2022 IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.

**IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಧಾರವಾಡ**

**ಎಸ್.ಸಿ. ಸಂಖ್ಯೆ 27/2022**

ಫಿರ್ಯಾದಿದಾರರು : ರಾಜ್ಯದ ಪರವಾಗಿ, ಸಹಾಯಕ ಸಬ್ ಇನ್ಸಪೆಕ್ಟರ್ , ಶಹರ ಪೊಲೀಸ ಠಾಣೆ, ಧಾರವಾಡ.

ವಿರುದ್ಧ

ಆರೋಪಿ : ಶಿವಶಂಕರ ತಂದೆ ದ್ಯಾಮಣ್ಣ ಗರಗ,
ವಯಸ್ಸುಃ 30 ವರ್ಷ, ಉದ್ಯೋಗಃ ಪೇಂಟರ,
ಸಾಃ ಅಶೋಕ ರೋಡ,
ಅಳ್ನಾವರ, ಜಿಲ್ಲೆಃ ಧಾರವಾಡ.
ಹಾಲಿವಸ್ತಿ ಧಾರವಾಡ.

**ಹೇಳಿಕೆ**

ಪ್ರಶ್ನೆಃ 1 ಈಗ ಓದಿ ಹೇಳಿ ವಿವರಿಸಿದ ಆರೋಪಣೆಯನ್ನು ಕೇಳಿದಿರಾ ಮತ್ತು ಅರ್ಥ ಆಗಿದೆಯಾ?

ಉತ್ತರಃ ಕೇಳಿದ್ದೇನೆ. ಅರ್ಥ ಆಗಿದೆ.

ಪ್ರಶ್ನೆಃ 2 ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಗೆ ಬಯಸುವಿರೋ?

ಉತ್ತರಃ ತಪ್ಪು ಮಾಡಿಲ್ಲ. ವಿಚಾರಣೆ ಆಗಬೇಕು

(ಆರೋಪಣೆಗಳನ್ನು ಆರೋಪಿತರಿಗೆ ಓದಿ ಹೇಳಿ ಅವರು ನೀಡಿದ ಉತ್ತರಗಳನ್ನು ಯತಾವತ್ತಾಗಿ ಈ ದಿನ ದಿನಾಂಕ 06/12/2022 ರಂದು ಅಭಿಲೇಖಿಸಿಕೊಳ್ಳಲಾಯಿತು.)

06.12.2022

ದಿನಾಂಕ: 06/12/2022

IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.

ಆರೋಪಿತರ ಸಹಿ.